1	2
18 08 2000	To hold discussions with the Officers of the Central Haj Committee Mumbai
22 09 2000	To call on the Chairman Central Haj Committee
10 10 2000	To attend the Tourism Road show
01 12 2000	To attend iftaar arranged by Sudi Arabian Airlines at Islam Gymkhana, Marine Drive, Mumbai
24 11 2001	To attend Iftaar arranged by Saudi Arbian Airlincs at Islam Gymkhana Marine Drive Mumbai
12 09 2002	To hold discussions with the Chairman Khadi and Village Industries Commission and other Officers of the Commission regarding the problem faced by the Khadi Woollen Artisans of State
18 10 2002	To call on the Union Minister of Civil Aviation to discuss the issues pertaining to Haj-2003 flights
29 11 2002	To hold discussions with the Chairman Khadi and Village Industries Commission and other Officers of the Commission regarding the problem faced by the Khadi woollen Artisans of Karnataka State
13 01 2003	To hold discussions with the Chairman, Khadi and Village Industries Commission
27 06 2003	To hold discussion with Sri Chinmay Basu Chief Executive Officer, Khadi and Village Industries Commission To hold discussions with the Officers of the Central Haj Committee
21 10 2003	To call on the Chairman Central Haj Committee, Mumbai, to discuss the issues relating to ensuing Haj Operations To visit Devanar Slaughter House, Govandi, Mumbai

ರಾಜ್ಯದಲ್ಲಿ ಬಸ್‌ಗಳಿಗೆ ಹೊಂಗೆ ಎಣ್ಣೆ ಇಂಧನ ಪೂರೈಕೆಯ ಬಗ್ಗೆ

70 (202) ಶ್ರೀ ಸದಾನಂದ ಗೌಡ ಡಿ ವಿ (ಪುತ್ತೂರು) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ತೈಲ ಇಂಧನಕ್ಕೆ ಪರ್ಯಾಯವಾಗಿ ಜೈವಿಕ ಇಂಧನ ಹೊಂಗೆ ಎಣ್ಣೆಯನ್ನು ಬಳಸಲು ರಾಜ್ಯ ಸರ್ಕಾರ ನಿರ್ಧರಿಸಿದೆಯೇ,

ಆ) ಇದರಿಂದ ನಗರದ ಸಾರಿಗೆ ಬಸ್ಸುಗಳನ್ನು ಓಡಿಸಲು ತೀರ್ಮಾನಿಸಲಾಗಿದೆಯೇ

ಇ) ಈ ಹೊಂಗೆ ಎಣ್ಣೆಯನ್ನು ಪೂರೈಸಲು ಯಾರಿಗೆ ಟೆಂಡರ್ ವಹಿಸಲಾಗಿದೆ

ಈ) ಈ ಎಣ್ಣೆಯಿಂದ ಈಗಾಗಲೇ ಎಷ್ಟು ಬಸ್ಸುಗಳನ್ನು ಓಡಿಸಲಾಗುತ್ತಿದೆ

ಉ) ಹೊಂಗೆ ಎಣ್ಣೆಯ ಖರೀದಿ ದರ ಎಷ್ಟು ಎಂದು ನಿಗಧಿಪಡಿಸಲಾಗಿದೆ ಸದರಿ ಎಣ್ಣೆಯಿಂದ ವಾಹನ ಎಷ್ಟು ಕಿ ಮೀ ಚಲಿಸುವ ಸಾಮರ್ಥ್ಯ ಹೊಂದಿದೆ

ಊ) ಪರ್ಯಾಯ ಇಂಧನವಾಗಿ ಬಳಸುವ ಈ ಎಣ್ಣೆಯ ಲಭ್ಯತೆ, ಇದರ ವೆಚ್ಚ ಪ್ರತಿದಿನ ಈ ಎಣ್ಣೆಯ ಪೂರೈಕೆ ಇತ್ಯಾದಿ ಸಂಗತಿಗಳ ಬಗ್ಗೆ ವಿವರ ನೀಡುವುದು?

ಶ್ರೀ ಬಿ ರಮಾನಾಥ್ ರೈ (ಸಾರಿಗೆ ಸಚಿವರು)

ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೇಯಲ್ಲಿ ಮಾತ್ರ ಪ್ರಯೋಗಾರ್ಥವಾಗಿ ಜೈವಿಕ ಇಂಧನ ಹೊಂಗೆ ಎಣ್ಣೆಯನ್ನು ಬಳಸಲು ರಾಜ್ಯಮಟ್ಟದ ಸಮನ್ವಯ ಸಮಿತಿಯಲ್ಲಿ ಚರ್ಚಿಸಿ ನಿರ್ಧರಿಸಲಾಗಿದೆ

ಆ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಮಾತ್ರ ಪ್ರಾಯೋಗಿಕವಾಗಿ ಎರಡು ವಾಹನಗಳನ್ನು ಜೈವಿಕ ಇಂಧನದಿಂದ ಕಾರ್ಯಾಚರಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ

ಇ) ಮೆ ಗುರು ಎಂಟರ್ ಪ್ರೈಸಸ್, ಗೌರಿಬಿದನೂರು ಇವರಿಗೆ ವಹಿಸಲಾಗಿದೆ

ಈ) ಎರಡು ಬಸ್ಸುಗಳನ್ನು ಪ್ರಾಯೋಗಿಕವಾಗಿ ಕಾರ್ಯಾಚರಣೆ ಮಾಡಲಾಗುತ್ತಿದೆ

ಉ) ಸದರಿ ಎಣ್ಣೆಯ ಬೆಲೆ ಪ್ರತಿ ಲೀಟರಿಗೆ ರೂ 23 50 ಆಗಿರುತ್ತದೆ ಸದರಿ ಎಣ್ಣೆಯಿಂದ ವಾಹನ ಪ್ರತಿ ಲೀಟರಿಗೆ ಸರಾಸರಿ 4 87 ಕಿ ಮೀ ಚಲಿಸುವ ಸಾಮರ್ಥ್ಯ ಹೊಂದಿದೆ

ಊ) ಹೊಂಗೆ ಎಣ್ಣೆ ಲಭ್ಯತೆ, ವೆಚ್ಚ ಹಾಗೂ ಪೂರೈಕೆ ಇತ್ಯದಿ ಸಂಗತಿಗಳ ಬಗ್ಗೆ ದೀರ್ಘವಾಗಿ ಅಭ್ಯಸಿಸಲು ರಾಜ್ಯದ ಪರಿಸರ ನಿರ್ವಹಣೆ ಮತ್ತು ಕಾರ್ಯನೀತಿ ಸಂಶೋಧನೆ ಸಂಸ್ಥ, ಬೆಂಗಳೂರು ಇವರಿಗೆ ವಹಿಸಲಾಗಿದೆ

ರಾಜ್ಯ ಸರ್ಕಾರ ಆನ್ ಲೈನ್ ಲಾಟರಿಯನ್ನು ನಿಷೇಧಿಸುವ ಬಗ್ಗೆ

71 (203) ಶ್ರೀ ಸದಾನಂದ ಗೌಡ ಡಿ ವಿ (ಪುತ್ತೂರು) ಮಾನ್ಯ ಸಣ್ಣ ಉಳಿತಾಯ ರಾಜ್ಯ ಲಾಟರಿ, ವಿಮೆ ಹಾಗೂ ಆಗ್ರೋ ಪ್ರೋಸೆಸಿಂಗ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಲಾಟರಿ ಹೊರತುಪಡಿಸಿ ಬೇರೆ ಬೇರೆ ರಾಜ್ಯಗಳು ಎಷ್ಟು ಮಾದರಿಯ ಲಾಟರಿಗಳು ರಾಜ್ಯದಲ್ಲಿ ಮರಾಟವಾಗುತ್ತಿವೆ

ಆ) ಈ ಲಾಟರಿ ಮಾರಾಟಕ್ಕೆ ರಾಜ್ಯ ಸರ್ಕಾರ ಅನುಮತಿ ನೀಡಿದೆಯೇ ಅನುಮತಿಯ ಮಾನದಂಡಗಳೇನು

ಇ) ಈಗ ರಾಜ್ಯ ಸರ್ಕಾರವು ಸದರಿ ಲಾಟರಿಗಳ (ಆನ್‌ಲೈನ್ ಸೇರಿ) ನಿಷೇಧಕ್ಕೆ ಸೂಚನೆಯನ್ನು ನೀಡಲಾಗಿದೆಯೇ

ಈ) ಈ ಸೂಚನೆಗೆ ಆ ರಾಜ್ಯಗಳಿಂದ ಬಂದ ಪ್ರತಿಕ್ರಿಯೆ ಏನು

ಉ) ಸರ್ಕಾರದ ಸೂಚನೆಗಳನ್ನು ಪಾಲಿಸದಿದ್ದಲ್ಲಿ ನಿಷೇಧವನ್ನು ಹೇರಲಾಗುವುದೇ?